**ಪ್ರಧಾನ** ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಾಕ್ಷಿಯ ಹೆಸರು :- ಸುಧಾಕರ್

ತಂದೆ/ಗಂಡನ ಹೆಸರು :- ಲೇಟ್ ಚೆಲುವಚಾರ್

ವಯಸ್ಸು :- 50 ವರ್ಷ

ಉದ್ಯೋಗ :- ಅಬಕಾರಿ ಉಪ ನಿರೀಕ್ಷಕರು

ವಾಸಸ್ಥಳ :- ಶ್ರೀರಂಗಪಟ್ಟಣ

(ಸಾಕ್ಷಿಗೆ ದಿನಾಂಕಃ 13-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನಾನು 08-08-2018 ರಿಂದ 20-12-2022 ವರೆಗೆ ಮಂಡ್ಯ ಉಪವಿಭಾಗ ವಲಯದ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ07-09-2021 ರಂದು ಬೆಳಿಗ್ಗೆ 11-20 ಗಂಟೆ ಸಮಯದಲ್ಲಿ ಮದ್ದೂರು, ಶಿವಪುರ ಟೌನ್ ಹಳೆ ಕೊಪ್ಪ ರಸ್ತೆಯ ಬಳಿಯಲ್ಲಿರುವ ಗಾಂಧಿ ಸರ್ಕಲ್ ಬಳಿ ಚಾಸಾ-1, 3 ರವರೊಂದಿಗೆ ಗಸ್ತು ನಡೆಸುತ್ತಿದ್ದಾಗ, ಶಿವಪುರ ಕಡೆಯಿಂದ ಒಬ್ಬ ಅಸಾಮಿಯು ಒಂದು ದ್ವಿಚಕ್ರ ವಾಹನದಲ್ಲಿ ಪ್ಲಾಸ್ಟಿಕ್ ಚೀಲದ ಗಂಟನ್ನು ಇಟ್ಟುಕೊಂಡು ಬರುತ್ತಿದ್ದು ದೂರದಿಂದಲೇ ಇಲಾಖಾ ವಾಹನ ಮತ್ತು ಸಮವಸ್ತ್ರಧಾರಿಯಾದ ನಮ್ಮಗಳನ್ನು ಕಂಡು, ವಾಹನ ಮತ್ತು ಪ್ಲಾಸ್ಟಿಕ್ ಚೀಲದ ಗಂಡನ್ನು ಬೀಳಿಸಿ ಓಡಿ ಹೋಗಿರುತ್ತಾರೆ ಹಿಡಿಯಲು ಪ್ರಯತ್ನಿಸಿದ್ದು ಸಿಕ್ಕಿರುವುದಿಲ್ಲ. ನಂತರ ವಾಹನದ ಹತ್ತಿರ ಬಂದು, ಅಲ್ಲಿಯೇ ಇದ್ದ ಸ್ಥಳೀಯರನ್ನು ಶೋಧನಾ ಕಾಲದಲ್ಲಿ ಪಂಚರಾಗಿ ಸಹಕರಿಸಲು ಕೋರಿದ್ದು, ಸದರಿಯವರು ನಿರಾಕರಿಸಿದ್ದು, ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲ ಕಾರಣ ನಿಯಮದಡಿಯಲ್ಲಿ ಚಾಸಾ-1 ರವರು ಶೋಧನಾ ವಾರೆಂಟ್ ನ್ನು ತಯಾರಿಸಿ, ಸದರಿ ನಿಂತಿದ್ದ ಗಾಡಿಯು ಕೆಎ-04-ಇ ಎಫ್ -3204 ಆಗಿದ್ದು, ನೀಲಿ ಸಿಲ್ವರ್ ಬಣ್ಣದ ಟಿ ವಿ ಎಸ್ ಕಂಪೆನಿಯ ಫಿಯರೋ ಗಾಡಿಯಾಗಿದ್ದು, ಪ್ಲಾಸ್ಟಿಕ್ ಚೀಲವನ್ನು ತೆರೆದು

ನೋಡಲಾಗಿ ಸದರಿಯಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ್ ಚಿಯರ್ಸ್ ವಿಸ್ಕಿಯ 96 ಟೆಟ್ರಾ ಪ್ಯಾಕ್ ಗಳು, ಮತ್ತೊಂದು ರಟ್ಟಿನ ಪೇಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ್ ಚಿಯರ್ಸ್ ವಿಸ್ಕಿಯ 48 ಟೆಟ್ರಾ ಪ್ಯಾಕ್ ಗಳು, ಮತ್ತು 180 ಬ್ಯಾಕ್ ಪೈಪರ್ ವಿಸ್ಕಿಯ 15 ಟೆಟ್ರಾ ಪ್ಯಾಕ್ ಗಳು, ಹಾಗೂ 330 ಮಿಲಿಯ ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ ನ 10 ಟಿನ್ ಗಳು ಇದ್ದವು , ಅವುಗಳಲ್ಲಿ ಕ್ರಮ ಸಂಖ್ಯೆ 1 ರಿಂದ 90 ಮಿಲಿಯ 10 ಟೆಟ್ರಾ ಪ್ಯಾಕ್ ಮತ್ತು ಕ್ರಮ ಸಂಖ್ಯೆ2 ರಿಂದ 90 ಮಿಲಿಯ 10 ಟೆಟ್ರಾ ಪ್ಯಾ ಕ್ ಗಳು, ಬ್ಯಾಕ್ ಪೈಪರ್ ವಿಸ್ಕಿಯ 180 ಮಿಲಿಯ 5 ಟೆಟ್ರಾ ಪ್ಯಾಕ್ ಗಳು ಹಾಗೂ ಕಿಂಗ್ ಫಿಶರ್ ಸ್ಟ್ರಾಂಗ್ 2 ಟಿನ್ ಗಳನ್ನು ರಾಸಾಯನಿಕ ಪರೀಕ್ಷಾ ವರದಿಗಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಒಲೆದು ಅರಗಿನಿಂದ ಸೀಲ್ ಮಾಡಿರುತ್ತೇವೆ ಮತ್ತು ಮಾದರಿ ಸೀಲ್ ನಕಲನ್ನು ತಯಾರಿಸಿರುತ್ತೇವೆ.

ಸದರಿ ಮಹಜರ್ ನ್ನು ಬೆಳಿಗ್ಗೆ 11-20 ರಿಂದ ಮಧ್ಯಾಹ್ನ 01-00 ಗಂಟೆಯವರೆಗೂ ಮಾಡಿರುತ್ತೇವೆ. ಸಾಕ್ಷಿಯು ಸದರಿ ಮದ್ಯವನ್ನು ಸೀಲ್ ಮಾಡಿದ ಮಾದರಿ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ವೇಳೆಯಲ್ಲಿ ಸ್ಥಳ ಮಹಜರ್ ನ್ನು ತಯಾರಿಸಿರುತ್ತೇನೆ. ಸದರಿ ಮಹಜರ್ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮುಂದಿನ ಕ್ರಮಕ್ಕಾಗಿ ವಿವಾದಿತ ವಾಹನ ಮತ್ತು ಮದ್ಯವನ್ನು ಠಾಣೆಗೆ ತಂದಿರುತ್ತೇವೆ. ಆ ದಿನ ಓಡಿ ಹೋದ ವ್ಯಕ್ತಿಯು ಈ ದಿನ ನ್ಯಾಯಾಲಯದಲ್ಲಿ ಇಲ್ಲ. ಈಗ ನ್ಯಾಯಾಲಯದ ಮುಂದೆಯಿರುವ ಮದ್ಯವೂ ಆ ದಿನ ಅಮಾನತ್ತುಪಡಿಸಿದ ಮತ್ತು ಎಫ್ ಎಸ್ ಎಲ್ ಗೆ ಕಳುಹಿಸಿದ ಮದ್ಯವಾಗಿದೆ ಮದ್ಯವನ್ನು ಒಟ್ಟಾರೆಯಾಗಿ ಎಂ ಓ-1 ರಿಂದ 25 ಟೆಟ್ರಾ ಪ್ಯಾಕ್ಗಳು ಎಂ ಓ-26 ಮತ್ತು 27 ಟಿನ್ ಗಳೆಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಬಿ ಎನ್ ವಕೀಲರವ ರಿಂದಃ</u>**

ನಮಗೆ ಮಾಹಿತಿ ಬಂದಾಗ, ನಾವು ಗಸ್ತು ಮಾಡುತ್ತಿದ್ದ ರಸ್ತೆಯು ಶಿವಪುರದ ಚಾಮನಹಳ್ಳಿ ಕಡೆಗೆ ಹೋಗುತ್ತಿತ್ತು ಅಲ್ಲಿ ಯಾವುದೇ ಬ್ರಿಡ್ಜ್ ಇರಲಿಲ್ಲ. ರೈಲ್ವೇ ಟ್ರ್ಯಾಕ್ ಇತ್ತು . ರೈಲ್ವೇ ಟ್ರ್ಯಾಕ್ ದಾಟಲು ರಸ್ತೆ ಇಲ್ಲ ಎಂದರೆ ಯು ಟರ್ನ್ ಪಡೆದು ಬ್ರಿಡ್ಜ್ ಕೆಳಗೆ

ಹೋಗಬೇಕು ಎನ್ನುತ್ತಾರೆ. ಮಹಜರ್ ನಲ್ಲಿ ನಮೂದಿಸಿರುವ ರಸ್ತೆಯು ರಸ್ತೆಯ ಕೊನೆಯ ಭಾಗವಾಗಿದ್ದು ಮುಂದಕ್ಕೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಗಸ್ತು ಮಾಡುವ ಸ್ಥಳದಲ್ಲಿ ಬೇರೆ ಬೇರೆ ಅಂಗಡಿಗಳು ಇದ್ದವು. ಗಾಂಧಿ ಸರ್ಕಲ್ ನಲ್ಲಿ ಅಂಗಡಿಗಳು ಇದ್ದವೋ ಇಲ್ಲವೋ ಎಂದು ನೆನಪಿಲ್ಲ. ವಾಸದ ಮನೆಗಳು ಇದ್ದವು. ನಾವು ನಿಂತಿದ್ದ ಸ್ಥಳದ ಉತ್ತರ ಭಾಗಕ್ಕೆ ರಸ್ತೆಯು ರೈಲು ನಿಲ್ದಾಣದ ಕಡೆಗೆ ಹೋಗುತ್ತದೆ. ನಾವು ಶಿವಪುರದ ಸರ್ವೀಸ್ ರಸ್ತೆಯಿಂದ ಬಂದಿರುತ್ತೇವೆ. ಸದರಿಯು ಮೈಸೂರು ಬೆಂಗಳೂರು ರಸ್ತೆಯ ಕಡೆಯಿಂದ ಗಾಂಧಿ ಸರ್ಕಲ್ ಕಡೆಗೆ ಬಂದಿರುತ್ತೇವೆ. ಸ್ಥಳೀಯರು ಸ್ಥಳವನ್ನು ಗಾಂಧಿ ಸರ್ಕಲ್ ಎಂದು ಹೇಳಿರುತ್ತಾರೆ. ಅಸಾಮಿಯು ಶಿವಪುರದ ಕಡೆಯಿಂದ ಬಂದಿರುತ್ತಾರೆ. ಸದರಿ ಅಸಾಮಿಯು ನಾವು ಹೋದ ಮಾರ್ಗದಲ್ಲೇ ಶಿವಪುರ ಕಡೆಯಿಂದ ಬಂದಿರುತ್ತಾರೆ. ಸದರಿ ಗಸ್ತು ಮಾಡುತ್ತಿದ್ದ ಸ್ಥಳದಲ್ಲಿ ಅಂಗಡಿ ಮಳಿಗೆಗಳು ಇದ್ದು ಬಾರ್ ಅಂಡ್ ರೆಸ್ಟೋರೆಂಟ್‌ಗಳು ಇರಲಿಲ್ಲ. ನಾವು ಇದ್ದ ಸ್ಥಳದಿಂದ ಅಂಗಡಿ ಮಳಿಗೆ ಗಳು ಸುಮಾರು 10-15 ಅಡಿ ಅಂತರದಲ್ಲಿದ್ದವು. ಆರೋಪಿ ದೂರದಲ್ಲಿ ನಮ್ಮನ್ನು ನೋಡಿ ಗಾಡಿಯನ್ನು ಬೀಳಿಸಿ ಓಡಿ ಹೋಗಿದ್ದು ಆತನನ್ನು ತಡೆಯಲು ಆಗಲಿಲ್ಲ ಆದರೆ ಹಿಡಿಯಲು ಪ್ರಯತ್ನಿಸಿದ್ದು ಸಿಗಲಿಲ್ಲ. ಆರೋಪಿಯು ಯಾರು ಮತ್ತು ಯಾವಾ ಊರಿನವರು ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಮಹಜರ್ ವಿಚಾರವಾಗಿ ಹೇಳಿಕೆ ನೀಡಿದ್ದೇನೆ. ಆದರೆ ಯಾವಾ ದಿನಾಂಕದಂದು ಹೇಳಿಕೆ ನೀಡಿದ್ದೇನೆಂದು ನೆನಪಿಲ್ಲ. ನನ್ನ ಸಮಕ್ಷಮ ಆರೋಪಿಯನ್ನು ಹಾಜರುಪಡಿಸಿರಲಿಲ್ಲ. ಹೇಳಿಕೆಯನ್ನು ಸುಮಾರು 10 ದಿನಗಳ ನಂತರ ನೀಡಿದ್ದೇನೆ. ವಿವಾದಿತ ದಿನಾಂಕದಂದು ಚಾಸಾ-1, 3 ರೊಂದಿಗೆ ವಿವಾದಿತ ಸ್ಥಳದಲ್ಲಿ ಗಸ್ತು ಮಾಡುತ್ತಿದ್ದೆವು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ಒಬ್ಬ ಅಸಾಮಿಯನ್ನು ನಮ್ಮನ್ನು

ನೋಡಿ ತನ್ನ ವಾಹನ ಮತ್ತು ಅದರಲ್ಲಿದ್ದ ಚೀಲವನ್ನು ಬಿಟ್ಟು ಓಡಿ ಹೋಗಿದ್ದಾರೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಚೀಲ ಪರಿಶೀಲಿಸಿದಾಗ ಮೇಲೆ ಹೇಳಿದ ವಿವಾದಿತ ಮದ್ಯ ಕಂಡುಬಂದಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದನ್ನು ವಶಪಡಿಸಿಕೊಳ್ಳಲು ಸಾರ್ವಜನಿಕರು ಪಂಚರಾಗಿ ಹಾಜರಾಗಿಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ಮೇಲೆ ಹೇಳಿದಂತೆ ರಾಸಾಯನಿಕ ವರದಿ ಪಡೆಯಲು ಮಾದರಿ ಮದ್ಯವನ್ನು ಪಡೆದಿದ್ದರೂ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ರಾಸಾಯನಿಕ ಮಾದರಿ ಪಡೆದಾಗ ಆ ಸಂಬಂಧ ಮಾದರಿ ಸೀಲ್ ನ್ನು ಅಂಟಿಸಿ ನಕಲನ್ನು ತಯಾರಿಸಿದ್ದೆವೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ನಿಪಿ-2 ರಂತೆ ಮಹಜರ್ ಮಾಡಿದ್ದಾಗಿ ಸುಳ್ಳು ನುಡಿಯುತ್ತಿದ್ದು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಎಂ ಓ-1 ರಿಂದ 27 ರ ಮಾದರಿಗಳು ಹೊರಗಡೆ ಸಿಗುತ್ತವೆ ಎಂದರೆ ಸರಿ. ನನ್ನ ಮೇಲಾಧಿಕಾರಿ ಸೃಷ್ಟಿಸಿದ ಪ್ರಕರಣಕ್ಕೆ ಸುಳ್ಳು ಸಹಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿಕೆ ನೀಡಿದ್ದಾಗಿ ಸುಳ್ಳು ನುಡಿಯುತ್ತಿದ್ದು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮದ್ದೂರು